ಕೇಂದ್ರ ಸರ್ಕಾರದ ಅಪ್ಪಣೆಯನ್ನು ತೆಗೆದುಕೊಂಡು ನಾವು ರೆಗ್ಯೂಲರೈಜ್ ಮಾಡುತ್ತೇವೆಂದು ಭರವಸೆ ಮತ್ತು ವಿಶ್ವಾಸವನ್ನು ಅವತ್ತು ಕೊಟ್ಟಿದ್ದರು. ಆ ಪ್ರಕಾರ ಈಗಾಗಲೇ ಕೊಡಲಾಗಿದೆ. ಈಗ ಬೆಂಗಳೂರಿನಲ್ಲಿ ಸುಮಾರು 22 ಸೈಟುಗಳನ್ನು ರದ್ದು ಪಡಿಸಲಾಗಿದೆ ಎಂದು ಹೇಳಿದ್ದಾರೆ. ಸರ್ಕಾರದವರು ಇವತ್ತು ಇಂಥ ಒಂದು ಕ್ರಮವನ್ನು ತೆಗೆದುಕೊಳ್ಳಬಾರದೆಂದು, ಅವರಿಗೆ ರೆಗ್ಯೂಲರೈಜ್ ಮಾಡಿಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಒಂದು ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರದವರಿಗೆ ಕಳುಹಿಸಿ ಕೊಟ್ಟಿದ್ದೇವೆ. ಈಗ ಕೇಂದ್ರ ಸರ್ಕಾರದವರು ಅದನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್ ಮತ್ತು ಆರ್ಥಿಕ ಇಲಾಖೆಗೆ ಕಳುಹಿಸಿಕೊಟ್ಟಿದ್ದಾರೆ. ಅದು ಬರುತ್ತದೆ. ನಾವು ಯಾರಿಗೂ ರದ್ದು ಮಾಡುವಂತಹ ವ್ಯವಸ್ಥೆಯನ್ನು ಮಾಡುವುದಿಲ್ಲ. ಕೊಟ್ಟಿದ್ದು ಕೊಟ್ಟ ಹಾಗೆ ಇದೆ, ಇನ್ನು ಮೇಲೆ ಅರಣ್ಯ ಜಮೀನನ್ನು ತೆಗೆದುಕೊಳ್ಳಬೇಕಾದರೆ ಕೇಂದ್ರ ಸರ್ಕಾರದ ಫಾರಸ್ಟ್ ಆಕ್ಟ್ ಪ್ರಕಾರ ನಾವು ಒಂದು ಎಕರೆ ತೆಗೆದುಕೊಂಡರೆ 4 ಎಕರೆ ಅವರಿಗೆ ಕೊಡಬೇಕಾಗುತ್ತದೆ. 20ಸಾವಿರ ರೂಪಾಯಿಗಳನ್ನು ಒಂದು ಹೆಕ್ಟರ್‌ಗೆ ಕೊಡಬೇಕಾಗುತ್ತದೆ. ಈ ಎಲ್ಲಾ ಉಪಯೋಗಗಳನ್ನು ನೋಡಿಕೊಂಡು ನಾವು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಆರ್.ಎನ್. ನಾಯಕ್ : ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಆಶ್ರಯ ಯೋಜನೆಗೆ ಕೊಡುವುದಕ್ಕೆ ಬೇರೆ ಭೂಮಿ ಇಲ್ಲ. ಬೇರೆ ಭೂಮಿ ಇಲ್ಲದಿದ್ದಾಗ ಯಾರು ಸೈಟು ಬಿಡುತ್ತಾರೋ ಅಂಥವರಿಗೆ ಸೈಟ್ ಕೊಡುವುದಕ್ಕೆ ಈ ಅರಣ್ಯ ಭೂಮಿಯನ್ನು ಅವಲಂಬಿಸಬೇಕಾಗುತ್ತದೆ. ಈ ಕಾರಣಕ್ಕಾಗಿ ಮಾನ್ಯ ಮಂತ್ರಿಗಳು ಆ ಅರಣ್ಯ ಭೂಮಿಯನ್ನು ಪಡೆಯುವುದಕ್ಕೆ ಕೇಂದ್ರ ಸರ್ಕಾರಕ್ಕೆ ಏನು ಬೇಡಿಕೆಗಳನ್ನು ಸಲ್ಲಿಸಿದ್ದಾರೆ? 17ಸಾವಿರ ಸೈಟುಗಳನ್ನು ಈಗ ಕೊಟ್ಟಿರುವುದನ್ನು ನಾವು ದಕ್ಕಿಸಿಕೊಳ್ಳುವುದಕ್ಕೆ ಅವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕು. ಈಗ ಬೆಂಗಳೂರಿನಲ್ಲಿ ಏನು ಮಾಡಿದ್ದಾರೋ ಮತ್ತು ಯಾರು ಅಧ್ಯಕ್ಷರು ಇದ್ದರು ಮತ್ತು ಅದು ಏಕೆ ರದ್ದು ಮಾಡಿದ್ದಾರೆ, ಕಾರಣವೇನು? ಎಂಬ ಬಗ್ಗೆ ವಿವರಣೆಯನ್ನು ಕೊಟ್ಟಿಲ್ಲ. ಅದನ್ನು ಕೊಡಬೇಕು.

ಶ್ರೀ ಗೋಪಿನಾಥ್ ಆರ್ ಸಾಂಡ್ರಾ : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಅರಣ್ಯ ಭೂಮಿ ಏನು ತೆಗೆದುಕೊಂಡಿದ್ದೇವೆ, ಅದನ್ನು ನಾವು ರೆಗ್ಯುಲರೈಸ್ ಮಾಡುವುದಕ್ಕೆ ಕೇಂದ್ರ ಸರ್ಕಾರದವರೊಡನೆ ಪತ್ರ ವ್ಯವಹಾರ ಮಾಡಿದ್ದೇವೆ. ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಹೋಗಿ ಅನುಮತಿಯನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗ ಇರುವವರನ್ನು ಕದಲಿಸುವುದೂ ಇಲ್ಲ, ಬದಲಿಸುವುದೂ ಇಲ್ಲ. ಅವರು ಇದ್ದಲ್ಲೇ ಇರುತ್ತಾರೆ. ಇನ್ನು ಮೇಲೆ ಮಾಡುವುದಕ್ಕೂ ಕೂಡ ನಾವು ಎಲ್ಲಿ ಜಮೀನು ಇಲ್ಲ ಅಲ್ಲಿ ಫಾರೆಸ್ಟ್ ಜಮೀನು ಬಿಟ್ಟು ಬೇರೆ ಜಮೀನು ಇಲ್ಲ, ಅಲ್ಲಿ ಅವರಿಗೆ ಪ್ರಸ್ತಾವನೆ ಕಳುಹಿಸಿ ಕೇಂದ್ರಸರ್ಕಾರದ ಅನುಮತಿ ತೆಗೆದುಕೊಂಡು ಅವರಿಗೆ ಸ್ಥಳವನ್ನು ಕೊಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರಾಯಚೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗ ಮತ್ತು ಹರಿಜನ ಗಿರಿಜನ ವಿದ್ಯಾರ್ಥಿನಿಲಯಗಳ ಬಗ್ಗೆ

525 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಯಲ್ಲಿ ಎಷ್ಟು ಹಿಂದುಳಿದ ಮತ್ತು ಹರಿಜನ ಗಿರಿಜನರ ವಿದ್ಯಾರ್ಥಿನಿಲಯಗಳಿವೆ?

ಅ) ಆವುಗಳಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಿವೆ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) 1) ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಈ ಕೆಳಕಂಡ ಹರಿಜನ ಗಿರಿಜನ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

1) ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ	41
2) ಅನುದಾನಿತ ಮೆಟ್ರಿಕ್ಪೂರ್ವ ವಿದ್ಯಾರ್ಥಿನಿಲಯ	1
3) ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯ	4
ಒಟ್ಟು	**46**

2)ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ವತಿಯಿಂದ ರಾಯಚೂರು ಜಿಲ್ಲೆಯಲ್ಲಿ ಈ ಕೆಳಕಂಡ ವಿದ್ಯಾರ್ಥಿನಿಲಯವನ್ನು ನಡೆಸಲಾಗುತ್ತಿದೆ.

1) ಮೆಟ್ರಿಕ್ಪೂರ್ವ ವಿದ್ಯಾರ್ಥಿನಿಲಯ	39
2) ಮೆಟ್ರಿಕ್ನಂತರದ ವಿದ್ಯಾರ್ಥಿನಿಲಯ	3
ಒಟ್ಟು	**42**

ಆ)	1) ಸಮಾಜ ಕಲ್ಯಾಣ ಇಲಾಖೆ	22
	2) ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆ	9
	ಒಟ್ಟು	**31**

ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳ ಹಂಚಿಕೆ ಕುರಿತು

467 - ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯಾದಂತ ಆಶ್ರಯ ಯೋಜನೆಯಡಿಯಲ್ಲಿ ಎಷ್ಟು ಪ್ಲಾಟುಗಳನ್ನು ವಿತರಣೆ ಮಾಡಲಾಗಿದೆ (ಜಿಲ್ಲಾವಾರು ಹಾಗೂ ನಗರ ವ್ಯಾಪ್ತಿಗೆ ಸೇರಿ ವಿವರ ನೀಡುವುದು)

ಆ) ಈ ಯೋಜನೆಯಡಿಯಲ್ಲಿ ಪ್ಲಾಟ್ ವಿತರಣೆಯಾದ ಫಲಾನುಭವಿಗಳಿಗೆ ಎಷ್ಟು ಮನೆಗಳನ್ನು ಕಟ್ಟಿಸಿ ಕೊಡಲಾಗಿದೆ?

ಇ) ಈ ವರ್ಷದಲ್ಲಿ ಈ ಯೋಜನೆಗೆ ಜಿಲ್ಲಾವಾರು ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಒಟ್ಟು 5,86,580 ನಿವೇಶನಗಳು ಹಂಚಲಾಗಿದೆ.

(ಜಿಲ್ಲಾವಾರು ವಿವರ ಅನುಬಂಧ 'ಅ' ನಲ್ಲಿ ಲಗತ್ತಿಸಿದೆ)

ಆ)	4,113	ಮನೆಗಳ ಕರ್ನಾಟಕ ಗೃಹ ಮಂಡಳಿಯಿಂದ
	2,935	ಮನೆಗಳು ಜಿಲ್ಲಾಧಿಕಾರಿಗಳಿಂದ
	7,048	ಒಟ್ಟು

ಇ) ಜಿಲ್ಲಾವಾರು ವಿವರ ಅನುಬಂಧ - 'ಆ' ನಲ್ಲಿ ಲಗತ್ತಿಸಿದೆ